## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಡೆಕ್ಕನ್ ಎಜುಕೇಷನ್ ಸೊಸೈಟಿ ಕಲಬುರಗಿ ಇವರು ಆಯೀಷಾ ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ ಹೊಸದಾಗಿ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:**
1. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರ ಪ್ರಸ್ತಾವನೆ ಸಂಖ್ಯೆ:ಎಸಿಎ/ಎಎಫ್‌ಎಫ್/ಪಿಹೆಚ್-126/2020-21, ದಿನಾಂಕ: 07.08.2020.
2. ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರ ವರದಿ ಸಂಖ್ಯೆ:ಔನಿಇ/37/ಯೋಜನೆ/2020-21, ದಿನಾಂಕ:27.11.2020.
3. ದಿನಾಂಕ:30.11.2020ರಂದು ನಡೆದ ಉನ್ನತ ಮಟ್ಟದ ಸಮಿತಿ ಸಭೆಯ ನಡವಳಿಗಳು.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1)ರ ಪ್ರಸ್ತಾವನೆಯಲ್ಲಿ, ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರು ಡೆಕ್ಕನ್ ಎಜುಕೇಷನ್ ಸೊಸೈಟಿ ಕಲಬುರಗಿ ಇವರು ಆಯೀಷಾ ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ ಹೊಸದಾಗಿ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ, ಸ್ಥಳೀಯ ಪರಿವೀಕ್ಷಣಾ ಸಮಿತಿಯ ವರದಿಯನ್ನು ದಿನಾಂಕ:26.12.2019 ರಂದು ನಡೆದ ಶೈಕ್ಷಣಿಕ ಪರಿಷತ್ ಸಮಿತಿಯಲ್ಲಿ ಮಂಡಿಸಿದ್ದು, ಸದರಿ ಸಮಿತಿಯು ಹೊಸದಾಗಿ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು 2020-21ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯನ್ನು (Affiliation) ನೀಡಲು ಶಿಫಾರಸು ಮಾಡಿರುತ್ತದೆ. ಸದರಿ ಶಿಫಾರಸ್ಸನ್ನು ದಿನಾಂಕ:02.01.2020ರಂದು ನಡೆದ ಸಿಂಡಿಕೇಟ್ ಸಭೆಯು ಅನುಮೋದಿಸಿದ್ದು, ಸದರಿ ಉದ್ದೇಶಿತ ಹೊಸ ಬಿ.ಫಾರ್ಮಸಿ ಕೋರ್ಸ್‌ನ್ನು ಒಪ್ಪಿಕೊಳ್ಳುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(2)ರ ವರದಿಯಲ್ಲಿ, ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರು ಡೆಕ್ಕನ್ ಎಜುಕೇಷನ್ ಟ್ರಸ್ಟ್, ಕಲಬುರಗಿ ಇವರು ಹೊಸದಾಗಿ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವುದಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇವರು ಸಲ್ಲಿಸಿರುವ ಪರಿವೀಕ್ಷಣಾ ವರದಿಯನುಸಾರ ಸದರಿ ಸಂಸ್ಥೆಯು ಭಾರತೀಯ ಫಾರ್ಮಸಿ ಪರಿಷತ್‌ನ ನಿಯಮಾನುಸಾರ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ, ಹಗರ್ಗಾ ಕ್ರಾಸ್, ರಿಂಗ್ ರಸ್ತೆ, ಕಲಬುರಗಿ, ಇಲ್ಲಿ ಆಯೀಷಾ ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ 60 ವಿದ್ಯಾರ್ಥಿಗಳ ಪ್ರವೇಶಮಿತಿಯಲ್ಲಿ ಹೊಸದಾಗಿ ಪ್ರಥಮ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಕುರಿತು ಕ್ರಮ ಕೈಗೊಳ್ಳಬಹುದಾಗಿದೆ ಎಂದು ಅಭಿಪ್ರಾಯ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(3)ರ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಈ ಸಂಸ್ಥೆಗೆ 60 ವಿದ್ಯಾರ್ಥಿಗಳ ಪ್ರವೇಶಮಿತಿಯಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಲು ಶಿಫಾರಸ್ಸು ಮಾಡಲಾಗಿದೆ.

ಕುಲಸಚಿವರ ಪ್ರಸ್ತಾವನೆ, ಔಷಧ ನಿಯಂತ್ರಕರ ವರದಿ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಡೆಕ್ಕನ್ ಎಜುಕೇಷನ್ ಸೊಸೈಟಿ, ಕಲಬುರಗಿ ಇವರ ಆಯೀಷಾ ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ 60 ವಿದ್ಯಾರ್ಥಿಗಳ ಪ್ರವೇಶಮಿತಿಯಲ್ಲಿ ಹೊಸದಾಗಿ ಪ್ರಥಮ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಪಿ.ಸಿ.ಐ ಮತ್ತು ಎ.ಐ.ಸಿ.ಟಿ.ಇ ನವದೆಹಲಿ ಹಾಗೂ ಅಗತ್ಯವಿರುವ ಇತರೆ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆಯನ್ನು ಪಡೆಯುವ ಷರತ್ತಿಗೊಳಪಟ್ಟು ಅನುಮತಿ ನೀಡಲು ನಿರ್ಧರಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 95 ಪಿಟಿಡಿ 2020, ಬೆಂಗಳೂರು, ದಿನಾಂಕ:30.12.2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡೆಕ್ಕನ್ ಎಜುಕೇಷನ್ ಸೊಸೈಟಿ, ಕಲಬುರಗಿ ಇವರು ಹಗರ್ಗಾ ಕ್ರಾಸ್, ರಿಂಗ್ ರಸ್ತೆ, ಕಲಬುರಗಿ ಇಲ್ಲಿ ಆಯೀಷಾ ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ 60 (ಅರವತ್ತು) ವಿದ್ಯಾರ್ಥಿಗಳ ಪ್ರವೇಶಮಿತಿಯಲ್ಲಿ ಹೊಸದಾಗಿ ಪ್ರಥಮ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ.

1. ಪ್ರಸ್ತಾಪಿಸಿರುವ ಬಿ.ಫಾರ್ಮಸಿ ಕಾಲೇಜು/ಕೋರ್ಸ್‌ನ್ನು ಪ್ರಾರಂಭಿಸುವ ಮೊದಲು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ, ನವದೆಹಲಿ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಇವರಿಂದ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುಮೋದನೆ/ ಅನುಮತಿಯನ್ನು ಪಡೆಯತಕ್ಕದ್ದು.
2. ಕಾಲೇಜನ್ನು ಪ್ರಾರಂಭಿಸುವ ಮುನ್ನ ಅಗತ್ಯವಿರುವ ಎಲ್ಲಾ ಮೂಲ ಸೌಲಭ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
3. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮ/ಆದೇಶಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು ಮತ್ತು ಸರ್ಕಾರಿ ಕೋಟಾ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.
4. ಅಖಿಲ ಭಾರತ ತಾಂತಿಕ ಶಿಕ್ಷಣ ಪರಿಷತ್ತು/ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
5. ರಾಜ್ಯ/ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
6. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.
7. ಸರ್ಕಾರ/ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಯಾವುದೇ ಕಾರಣಕ್ಕೂ ಕಾಲೇಜಿನ ಹೆಸರು ಮತ್ತು ವಿಳಾಸವನ್ನು ಬದಲಾಯಿಸುವಂತಿಲ್ಲ.
8. ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ಕೋರ್ಸ್‌ನ ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆಯತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ಸೀಟುಗಳಲ್ಲಿ ಕಾಲಕಾಲಕ್ಕೆ ಸರ್ಕಾರವು ನಿಗದಿಪಡಿಸುವ ಅನುಪಾತದಲ್ಲಿ ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟಕೊಡತಕ್ಕದ್ದು.

. . . 3

9. ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಔಷಧ ನಿಯಂತ್ರಕರು ಖಚಿತಪಡಿಸಿಕೊಳ್ಳುವುದು.
10. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದ್ದಲ್ಲಿ ಸಂಯೋಜನೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಬಿ.ಎಸ್. ನಾಗರಾಜ್)
ಸರ್ಕಾರದ ಉಪ ಕಾರ್ಯದರ್ಶಿ–3
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
30/12/20

ಇವರಿಗೆ:

1. The Registrar-cum-Secretary, Pharmacy Council of India, NBCC centre, 3rd Floor, Plot No.2, Community Centre, Maa Anandamai Marg, Okhla Phase-I, New Delhi-110 020.
2. The Member Secretary, All India Council for Technical Education, Nelson Mandela Marg, Vasanth Kunj, New Delhi – 110 067
3. ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
4. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ.ಬ್ಲಾಕ್, ಜಯನಗರ, ಬೆಂಗಳೂರು–41.
5. ಸದಸ್ಯ ಕಾರ್ಯದರ್ಶಿ, ಪರೀಕ್ಷಾ ಪ್ರಾಧಿಕಾರ ಮಂಡಳಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಪಿ.ಕಾಳಿಂಗರಾವ್ ರಸ್ತೆ, ಬೆಂಗಳೂರು–560 027.
6. ಕಾರ್ಯದರ್ಶಿಗಳು, ಡೆಕ್ಕನ್ ಎಜುಕೇಷನ್ ಸೊಸೈಟಿಯ ಆಯೀಷಾ ಕಾಲೇಜ್ ಆಫ್ ಫಾರ್ಮಸಿ, ಹಗರ್ಗಾ ಕ್ರಾಸ್, ರಿಂಗ್ ರಸ್ತೆ, ಕಲಬುರಗಿ–585104

ಪ್ರತಿಗಳು:–

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಉಪ ಕಾರ್ಯದರ್ಶಿ–3, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು.
4. ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

// True Translation original in Kannada to English//

**Emblem**

**The proceedings of the Government of Karnataka**

Sub:- Regarding grant of permission for starting of B. Pharmacy course under the Deccan Education Society Kalaburagi in the name of Ayesha College of Pharmacy.

Read over:-1) Proposal No. ACA/AFF/PH-126/2020-21, dated: 07/08/2020 of Registrar,University of Rajiv Gandhi Health Sciences.

2) Report No. DCD/37 /plan/2020-21 dated: 27/11/2020 of Drugs Drugs Controller, Department of Drugs control Bangaluru.

3) Proceedings dated: 30/11/2020 of Higher Level committee.

-0-

PREAMBLE:

That in the above said read over proposal Sl.No.1 the Registrar , University of Rajiv Gandhi Health sciences, Bangaluru is submitted the report regarding starting of New B. Pharmacy college under the Deccan Education Society, Kalaburagi in the name of Ayesha college of Pharmacy before the committee of Educational council is conducted on dated: 26/12/2019. The said committee recommended to the affiliation for starting of the New B. Pharmacy course during the educational academic year 2020-21. The said recommendation is approved in the Syndicate committee conducted on dated: 02/02/2020. And requested to the Govt. for consenting of the proposed New B. Pharmacy course.

That in report of above said read over Sl.No.2 of Drugs controller, Department of Drugs control Bangaluru for regarding of grant of permission for starting of New B. Pharmacy course to Deccan Educational society Kalaburagi , as per inspection report submitted by the principal, Govt. College of Pharmacy Bagaluru, the said society is having the essential basic facilities as per norms of Pharmacy council of Indian , the opinion is submitted regarding to take action for grant of permission to Starting of Ist year New B. Pharmacy course in the name of Ayesha college of Pharmacy at Hagarga cross, Ring road Kalaburagi, during the educational academic year 2020-21 for intake of 60 students Admission.

That in the above said read over Sl.No.3 the Higher level committee is recommended to grant the permission for starting of Ist Year B. Pharmacy course during the Educational Academic year 2020- 21 for the under the limits of 60 students Admission to the said society.

"ATTESTED"

..2

NOTARY SHARANABASAPPA CHITALI Dist. Kalaburagi Reg.No.21574/2020 Ex.Dt.07-03-2025 GOVT. OF INDIA

SHARANABASAPPA CHITALI
M.Ed., LL.B (Spl.), PGD IN J&M
ADVOCATE & NOTARY PUBLIC
GOVT. OF INDIA. DIST. KALABURAGI

No. of Corrections (one)

- 8 JAN 2021

That Govt. after verification of the proposal of the Registrar, Report of the Drugs controller and available documents for decided to grant the permission for starting of the New Ist year B.Pharmacy course during the Educational Academic year 2020-21 under the limits of the 60 students Admission ,under the Deccan Education society Kalaburag in the name Ayesha College of Pharmacy on the conditions of the approval from the P.C.I and A.I.C.T.E New Delhi and from essential other appropriate authorities. Therefore the following order.

GOVT.ORDER NO. Aakuk/95/ PTD/2020, BANGALURU,DATED: 30/12/2020

In view of the detail facts prescribed in the preamble the permission is granted for starting of the Ist year New B.Pharmacy course under the Deccan Education society Kalaburagi at Hagarga cross, Ring road ,Kalaburagi in the name of Ayesha college of Pharmacy during the Educational Academic year 2020-21 with an intake of 60 students admission on the following conditions:

1) Before starting of the proposed B.Pharmacy college/course the availed the permission/ approval from the Pharmacy council of India New Delhi and All India Council of Technical Education and University of Rajeev Gandhi Health Sciences.

2) Before starting of the college should have the essential all basic facilities and staffs.

3) The society must and should follow the at present rules /orders of the Govt. for allotment of the seats for admissions. And should leave the Govt. quota seats.

4) The compulsory follow the prescribed rules of the All India council for Technical education /Pharmacy council of India.

5) Follow the rules, regulation and orders to time to time issued by the State/Central Govt.

6) The Govt. of Karnataka is could not provide the any kind of grants, financial facilities to the college. This is under the conditions of permanent un-aided.

7) Without prior permissions of the Govt./authority should not changes the name and address of the college.

8) The fees should be availed from the student as fixed by the Govt. time to time only And Govt. seat should be leave in the sanctioned by the authority time to time as affixed ratio of Govt.

9) The financial status of the society shall be confirmed by the Drugs controller

..3

No, of Corrections (Nil)

NOTARY SHARANABASAPPA CHITALI Dist. Kalaburagi Reg.No.21574/2020 Ex.Dt.07-03-2025 GOVT. OF INDIA

"ATTESTED"

SHARANABASAPPA CHITALI
M.Ed., LL.B (Spl.), PGD IN J&M
ADVOCATE & NOTARY PUBLIC
GOVT. OF INDIA. DIST. KALABURAGI

- 8 JAN 2021

10) The Govt. above prescribed if any conditions are violated, the approval/ permission will be withdrawing.

In name and order of the Governor of Karnataka.
Sd/-
(B.S Nagaraj)
Under Dy. Secretaruy-3
Department Health and Family welfare

To,
1) The Registrar-cum Secretary, Pharmacy council of India, NBCC centre, 3rd Floor, Plot No.2, community centre,k Maa Ananadmani Marg, Okhala Phase-I, NewDelhi.
2) The Member Secretary,All India Council for Technical Education, Nelson Mandela Marga Vasanth Kunj, New Delhi-110067.
3) Drugs controller, Department of Drugs control, Palace road, Bangaluru
4)Registrar, University of Rajiv Gandhi Health sciences 4th T Block Jaya Nagar Bangaluru-41
5) Member Secretary, Examination authority Govt. Pharmacy College, P.Kalingrao road, Bangalore-560 027.
6) Secretary, Deccan Education society, Ayesha college of Pharmacy Hagarga cross, Ring road, Kalaburagi-585104

*Copy to*

1) Personal secretary to the Minister for Health and Family welfare and Medical.
2) Personal secretary to the Govt.Addl Chief Secretary Dept. of Health and Family welfare
3) Personal Asst. to the Govt.Dy.Secretary-3 Department of Health and family welfare.
4) Section file/Addl copy.

Translated by.

NOTARY SHARANABASAPPA CHITALI Dist. Kalaburagi Reg.No.21574/2020 Ex.Dt.07-03-2025 GOVT. OF INDIA

"ATTESTED"
SHARANABASAPPA CHITALI
M.Ed., LL.B (Spl.), PGD IN J&M
ADVOCATE & NOTARY PUBLIC
GOVT. OF INDIA. DIST. KALABURAGI

No. of Corrections (nil)

- 8 JAN 2021

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡೆಕ್ಕನ್ ಎಜುಕೇಷನ್ ಸೊಸೈಟಿ (ರಿ), ಕಲಬುರ್ಗಿ ಇವರು ಹೊಸದಾಗಿ ಡಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: 1. ಕಾರ್ಯದರ್ಶಿ, ಡೆಕ್ಕನ್ ಎಜುಕೇಷನ್ ಸೊಸೈಟಿ (ರಿ), ಕಲಬುರ್ಗಿ ಇವರ ಪತ್ರ ಸಂಖ್ಯೆ:ಡಿಇಎಸ್/ಎಸ್‌ಇಪಿ/2017-18, ದಿನಾಂಕ: 30.12.2016.

2. ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ:ಔನಿಇ/186/ಯೋಜನೆ/2016-17, ದಿನಾಂಕ:11.05.2017.

***

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ (1)ರ ಪತ್ರದಲ್ಲಿ, ಕಾರ್ಯದರ್ಶಿ, ಡೆಕ್ಕನ್ ಎಜುಕೇಷನ್ ಸೊಸೈಟಿ (ರಿ), ಹಗರ್ಗಾ ಕ್ರಾಸ್, ರಿಂಗ್ ರಸ್ತೆ, ಕಲಬುರ್ಗಿ ಇವರು ತಮ್ಮ ಸೊಸೈಟಿ ವತಿಯಿಂದ 2017-18ನೇ ಶೈಕ್ಷಣಿಕ ಸಾಲಿನಿಂದ ಡಿ.ಫಾರ್ಮ ಕಾಲೇಜನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ (2)ರ ಪ್ರಸ್ತಾವನೆಯಲ್ಲಿ, ಔಷಧ ನಿಯಂತ್ರಕರು, ಔಷದ ನಿಯಂತ್ರಣ ಇಲಾಖೆ, ಬೆಂಗಳೂರು ಇವರು ಡಕ್ಕನ್ ಎಜುಕೇಷನ್ ಸೊಸೈಟಿ (ರಿ) ಕಲಬುರ್ಗಿ ವತಿಯಿಂದ ಕಲಬುರ್ಗಿಯಲ್ಲಿ ಹೊಸದಾಗಿ ಡಿ. ಫಾರ್ಮಸಿ ಕೋರ್ಸ್ ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ ಸದಸ್ಯ ಕಾರ್ಯದರ್ಶಿ, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ಇವರು ಸಲ್ಲಿಸಿರುವ ಪರಿವೀಕ್ಷಣಾ ವರದಿಯನುಸಾರ ಸದರಿ ಸೊಸೈಟಿಯ ಖಾತೆ ಸಂಖ್ಯೆ: 34/2, 35/1 ನೂರಾನಿ ಮೊಹಲ್ಲಾ, ಪೀರ್ ಬಂಗಾಲಿ ದರ್ಗಾ, ರಿಂಗ್ ರಸ್ತೆ, ಕಲಬುರ್ಗಿ ಇಲ್ಲಿ 2.5 ಎಕರೆ ಸ್ವಂತ ಭೂಮಿಯನ್ನು ಹೊಂದಿದ್ದು, 60 ವಿದ್ಯಾರ್ಥಿಗಳ ಪ್ರಥಮ ಡಿ. ಫಾರ್ಮ ತರಗತಿಗಳನ್ನು ಪ್ರಾರಂಭಿಸಲು ಕಟ್ಟಡವು ಸೂಕ್ತವಾಗಿರುತ್ತದೆ ಮತ್ತು ನಿಯಮಾನುಸಾರ ಅಗತ್ಯವಿರುವ ಮೂಲ ಸೌಲಭ್ಯಗಳನ್ನು ಹೊಂದಿರುವುದರಿಂದ, ಸೂಕ್ತ ಷರತ್ತುಗಳನ್ನು ವಿಧಿಸಿ, 2017-18ನೇ ಶೈಕ್ಷಣಿಕ ಸಾಲಿನಿಂದ ಡಿ. ಫಾರ್ಮ ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ನೀಡಬಹುದಾಗಿದೆಯೆಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಔಷಧ ನಿಯಂತ್ರಕರ ಪ್ರಸ್ತಾವನೆ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಡೆಕ್ಕನ್ ಎಜುಕೇಷನ್ ಸೊಸೈಟಿ (ರಿ), ಕಲಬುರ್ಗಿ ವತಿಯಿಂದ ಕಲಬುರ್ಗಿಯಲ್ಲಿ ಆಯೆಷಾ ಕಾಲೇಜ್ ಆಫ್ ಫಾರ್ಮಸಿ ಹೆಸರಿನಲ್ಲಿ 2017-18ನೇ ಶೈಕ್ಷಣಕ ಸಾಲಿನಿಂದ 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಹೊಸದಾಗಿ ಪ್ರಥಮ ಡಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ, ನವದೆಹಲಿ ಹಾಗೂ ಅಗತ್ಯವಿರುವ ಇತರೆ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆಯನ್ನು ಪಡೆಯುವ ಮತ್ತು ಇತರೆ ಷರತ್ತುಗಳಿಗೊಳಪಟ್ಟು ಅನುಮತಿ ನೀಡಲು ನಿರ್ಧರಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 12 ಪಿಟಿಡಿ 2017, ಬೆಂಗಳೂರು, ದಿನಾಂಕ:05.06.2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡೆಕ್ಕನ್ ಎಜುಕೇಷನ್ ಸೊಸೈಟಿ (ರಿ), ಕಲಬುರ್ಗಿ ಇವರು ಖಾತಾ ಸಂಖ್ಯೆ:34/2, 35/1, ನೂರಾನಿ ಮೊಹಲ್ಲಾ, ಪೀರ್ ಬಂಗಾಲಿ ದರ್ಗಾ, ರಿಂಗ್ ರಸ್ತೆ, ಕಲಬುರ್ಗಿ ಇಲ್ಲಿ ಆಯೆಷಾ ಕಾಲೇಜ್ ಆಫ್ ಫಾರ್ಮಸಿ ಹೆಸರಿನಲ್ಲಿ 2017-18 ನೇ ಶೈಕ್ಷಣಿಕ ಸಾಲಿನಿಂದ 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಹೊಸದಾಗಿ ಪ್ರಥಮ ಡಿ.ಫಾರ್ಮಸಿ ಕೋರ್ಸ್

ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ.

1. ಪ್ರಸ್ತಾಪಿಸಿರುವ ಡಿ.ಫಾರ್ಮಸಿ ಕಾಲೇಜು/ಕೋರ್ಸ್‌ನ್ನು ಹೊಸದಾಗಿ ಪ್ರಾರಂಭಿಸಲು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ, ನವದೆಹಲಿ ಇವರಿಂದ ಅನುಮೋದನೆಯನ್ನು ಪಡೆಯತಕ್ಕದ್ದು.
2. ಕಾಲೇಜನ್ನು ಪ್ರಾರಂಭಿಸುವ ಮುನ್ನ ಅಗತ್ಯವಿರುವ ಮೂಲ ಸೌಲಭ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
3. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು.
4. ಅಖಿಲ ಭಾರತ ತಾಂತಿಕ ಶಿಕ್ಷಣ ಪರಿಷತ್ತು/ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
5. ರಾಜ್ಯ/ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
6. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.
7. ಸರ್ಕಾರ/ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಯಾವುದೇ ಕಾರಣಕ್ಕೂ ಕಾಲೇಜಿನ ಹೆಸರು ಮತ್ತು ವಿಳಾಸವನ್ನು ಬದಲಾಯಿಸುವಂತಿಲ್ಲ.
8. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದಲ್ಲಿ ಸಂಯೋಜನೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)
(ದೂರವಾಣಿ ಸಂಖ್ಯೆ:22034292)

ಇವರಿಗೆ:

1) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2) ಸದಸ್ಯ ಕಾರ್ಯದರ್ಶಿ, ಪರೀಕ್ಷಾ ಪ್ರಾಧಿಕಾರ ಮಂಡಳಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಪಿ.ಕಾಳಿಂಗರಾವ್ ರಸ್ತೆ, ಬೆಂಗಳೂರು-560 027.
3) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ.ಬ್ಲಾಕ್, ಜಯನಗರ, ಬೆಂಗಳೂರು.
4) ಕಾರ್ಯದರ್ಶಿ, ಡೆಕ್ಕನ್ ಎಜುಕೇಷನ್ ಸೊಸೈಟಿ (ರಿ), ಹಗರ್ಗಾ ಕ್ರಾಸ್, ರಿಂಗ್ ರಸ್ತೆ, ಕಲಬುರ್ಗಿ-585 104.

ಪ್ರತಿಗಳು:-

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು-01.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರಿಗೆ.
3. ಸರ್ಕಾರದ ಉಪ ಕಾರ್ಯದರ್ಶಿ-3, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
4. ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

// True Translation original in Kannada to English//

**Emblem**

**The proceedings of the Government of Karnataka**

Sub:- Regarding issue of permission to start new D.Pharmacy course to Deccan Education Society (R) Kalaburagi.

---

READ OVER : -

1) The letter of Secretary Deccan Education Society (R) Kalaburagi No.DES/SEP/2017-18 Dt.30/12/16
2) The Proposal of Drug controller, Drug Control Dept.Bangalore No.DCD/186/PR/16-17.

PROPOSAL:-

In the letter No.1 read over above, the Secretary Deccan Education Society (R) Hagarga Cross, Ring road, Kalaburagi has requested to the Government to grant permission for establishment of D.Pharmacy college from the Educational academic year 2017-18.

In the proposal No.2, read over above, the Drug controller, Drug control Dept.Bangalore, and as per the inspection report submitted by the Drug controller to start D.Pharmacy course by the Deccan Education Society (R) Kalaburagi , and in respect of that the Member Secretary, Board of Examination Authority Bangalore. As per the report submitted the KHATA No.34/2, 35/1 situated at Noorani Mohalla, Peer Bangali Darga , Ring road, Kalaburagi is having 2.5 Acres of Land and the building is sufficient to start the lst year D.Pharma course with an admission of 60 students, and having all the basic facility as per rules, by imposing proper conditions the report for grant of permission is submitted to the Government to start the D.Pharma course from the educational academic year 2017-18.

The proposal of the Drug Controller and the documents available have been verified in detail, the government has decided to grant the permission to Deccan Education Society(R) Kalaburagi to start Ayesha college of Pharmacy from the Academic year 2017-18 at Kalaburagi with a limit of intake of admission of 60 students to start Ist year Diploma course and with a subject to obtain the permission from the Pharmacy council of India , New Delhi which is essential. And also from the concerned authorities, hence the order as under:

**THE GOVT.ORDER No.HFW/12PTD/2017 BANGALORE, DT.5/6/2017**

In view of the facts described in the proposal, the permission khkas been granted to Deccan Education Society ® Kalaburagi at Khata No.34/2, 35/1, Noorani Mohalla, Near Peer Bangali Darga, Ring road, Kalaburagi in the name of Ayesha college of Pharmacy from the Educational academic year 2017-18with an admission of intake of 60 students to start Ist year D.Pharmacy course with a subject to following terms and conditions:

"ATTESTED"

NOTARY SHARANABASAPPA CHITALI Dist. Kalaburagi Reg.No.21574-2020 Ex.Dt.07-03-2025 GOVT. OF INDIA

SHARANABASAPPA CHITALI
M.Ed., LL.B (Spl.), PGD IN J&M
ADVOCATE & NOTARY PUBLIC
GOVT. OF INDIA, DIST. KALABURAGI

- 8 JAN 2021

No. of Corrections (nil)

..2

1) The proposed D. Pharmacy course has to obtain the approval from the Pharmacy council of India, New Delhi.
2) Before starting the college all the basic facilities and staff have to be provided.
3) In the distribution of Govt. seats, at the time of admission shall be binding with the rules which are in existence.
4) All the rules prescribed by the Pharmacy council of India New Delhi and All India Council for Technical Education are to be followed without fail.
5) The intimation and orders issued by the State and Central Government from time to time are to be followed.
6) Under any circumstances no grant in aid, will be provided to this college from the Govt. of Karnataka and this order is subject to permanently unaided one.
7) Without prior permission of the Govt./Authority for any reason the name and address of the college shall not be changed.
8) If any of the conditions imposed by the Government mentioned above, are found to be violated this approval/permission will be revoked.

In name and order of the Governor
of Karnataka.
Sd/-
(B.Kamalamma)
Under Secretaruy
Department Health and Family welfare
(Systems of Indian Medical)

To,

1)Drugs controller, Department of Drugs control, Palace road, Bangaluru .
2)Member Secretary, Board of Examination authority, Govt. Pharmacy College, P.Kalingrao road, Bangalore-560 027.
3)Registrar, University of Rajiv Gandhi Health sciences 4th T Block Jaya Nagar Bangaluru.
4)Secretary,Deccan Education society®, Hagarga cross, Ring road, Kalaburagi-585104

Copy to

1) Personal secretary to the Minister for Health and Family welfare Vikas Soudha Bangalore.
2) Personal secretary to the Chief Secretary Dept.of Health and Family welfare
3) Personal Asst. to the Govt.Dy.Secretary-3 Department of Health and family welfare.
4) Section file/Addl copy.

Translated by.

NOTARY SHARANABASAPPA CHITALI Dist. Kalaburagi Reg.No.21574/2020 Ex.Dt.07-03-2025 GOVT. OF INDIA

"ATTESTED"

SHARANABASAPPA CHITALI
M.Ed. LL.B (Spl.). PGD IN J&M
ADVOCATE & NOTARY PUBLIC
GOVT. OF INDIA. DIST. KALABURAGI

No. of Corrections (Nil)

- 8 JAN 2021